

# ಗಣೇಶನ ಬದುಕಿಗೆ ಸಿಹಿಯಾದ ಜೇನುಕೃಷಿ

**ಡಿಪ್ಲೊಮಾ ನಂತರ ಕವಲುದಾರಿಯಲ್ಲಿ ನಿಂತ ಅಚವೆಯ ಗಣೇಶ್ ಅವರನ್ನು ಕೈಹಿಡಿದದ್ದು ಜೇನುಕೃಷಿ. ಜೇನು ಅವರ ಬಾಯಿಯನ್ನು ಮಾತ್ರವಲ್ಲ, ಬದುಕನ್ನೂ ಸಿಹಿಯಾಗಿಸಿದೆ. ಗಣೇಶ್ ಅವರೀಗ ಆಸಕ್ತರಿಗೆ ಜೇನುಸಾಕಣೆಯ ಬಗ್ಗೆ ಪಾಠ ಮಾಡಬಲ್ಲರು.**

■ ಫಾಲ್ಗುಣ ಗೌಡ ಅಚವೆ

ಓದಿದ್ದು ಎಲೆಕ್ಟ್ರಾನಿಕ್ ಡಿಪ್ಲೊಮಾ. ಜೀವನ ನಿರ್ವಹಣೆಗೆ ಆಯ್ದುಕೊಂಡದ್ದು ಜೇನುಸಾಕಣೆ. ಡಿಪ್ಲೊಮಾ ಓದಿದ ಬಗ್ಗೆ ಯಾವ ಹಮ್ಮುಬಿಮ್ಮು ಇಟ್ಟುಕೊಳ್ಳದೆ ಜೇನುಸಾಕಣೆಯನ್ನು ವ್ರತದಂತೆ ಸ್ವೀಕರಿಸಿರುವ ಈ ಸಾಧಕನ ಹೆಸರು ಗಣೇಶ ಮಾರುತಿ ನಾಯ್ಕ. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಅಚವೆಯವರು.

ಕುಮಟಾದ ಕೆನರಾ ರುಡ್‌ಸೆಟ್‌ನಲ್ಲಿ ಜೇನುಸಾಕಣೆ ತರಬೇತಿ ಪಡೆದು, ಕೇವಲ ಎರಡು ಪೆಟ್ಟಿಗೆಯಿಂದ ಜೇನುಸಾಕಣೆ ಆರಂಭಿಸಿದ ಗಣೇಶ, ಈಗ 300 ಜೇನುಪೆಟ್ಟಿಗೆ ಹೊಂದಿದ್ದಾರೆ. ಜೇನು ಮಾರಾಟದ ಮೂಲಕ ಸ್ವಾವಲಂಬನೆಯ ಬದುಕು ಕಂಡುಕೊಂಡಿದ್ದಾರೆ.

ಗಣೇಶ ಅವರ ತಂದೆ ಕೃಷಿಕರು. ಮಗ ತಮ್ಮಂತೆ ಕೃಷಿಕನಾಗುವುದು ಬೇಡ; ಯಾವುದಾದರೂ ಉತ್ತಮ ಆದಾಯದ ಕೆಲಸಕ್ಕೆ ಸೇರಿಕೊಳ್ಳಲೆಂದು ಡಿಪ್ಲೊಮಾ ಓದಿಸಿದರು. ಡಿಪ್ಲೊಮಾ ತರುವಾಯ ಗಣೇಶ್ ಅಚವೆಯಲ್ಲಿ ಜೀವನ ನಿರ್ವಹಣೆಗಾಗಿ ಒಂದು ಅಂಗಡಿ ಇಟ್ಟುಕೊಂಡರು. ಜೆರಾಕ್ಸ್, ಮದುವೆ ಆಮಂತ್ರಣ ಪತ್ರಿಕೆ, ಮೊಬೈಲ್ ಸರ್ವಿಸ್, ಸೇಲ್ಸ್, ವಿಜಿಟಿಂಗ್ ಕಾರ್ಡ್, ಫೋಟೊ, ವೀಡಿಯೋಗ್ರಫಿ ಹೀಗೆ ವಿವಿಧ ಸೇವೆಗಳನ್ನು ಒದಗಿಸುವ ಅಂಗಡಿ ಅವರದಾಗಿತ್ತು. ಯಾಕೋ ಆ ಕೆಲಸ ಅಂದುಕೊಂಡಂತೆ ಸಾಗಲಿಲ್ಲ. ಗಳಿಕೆ ಅಷ್ಟಕ್ಕಷ್ಟೇ ಎಂದಾಗ, ಅವರ ಕಣ್ಣು ಬೇರೆಡೆ ಹರಿಯತೊಡಗಿತು. ಆಗ ಅವರ ಗಮನಹರಿದದ್ದು ಜೇನುಸಾಕಣೆಯತ್ತ. ಮುಂದಿನದೆಲ್ಲ ಸಿಹಿ ಸವಿಯುವ ಸಮಯ.

ಅಚವೆಯ 'ವಿಭೂತಿ ಫಾಲ್ಸ್' ಪ್ರವಾಸಿಗರ ಆಕರ್ಷಣೆಯ ಸ್ಥಳ. ಜಲಪಾತ ನೋಡಲೆಂದು ಅಚವೆಗೆ ಬರುವ ಪ್ರವಾಸಿಗರು ಗಣೇಶ್ ಅವರ ಮನೆಗೆ ಬಂದು ತಾಜಾ ಜೇನು ಖರೀದಿಸುತ್ತಾರೆ. ಅಂಟುವಾಳ ಮರಕ್ಕೆ ಹೂ ಅಗುವ ಸಂದರ್ಭದಲ್ಲಿ ಮಾತ್ರ ಸಿಗುವ ಅಂಟುವಾಳ ಜೇನು ಹಾಗೂ ಮಿಶ್ರಿ ಜೇನು ಗಣೇಶರ ಬಳಿ ಲಭ್ಯ. ಜೇನುಪೆಟ್ಟಿಗೆಯಿಂದ ತಾಜಾ ಹನಿ ತೆಗೆದು ಕೂಡ ಪ್ರವಾಸಿಗರಿಗೆ ನೀಡುತ್ತಾರೆ.

ಜೇನು ಕೃಷಿಕರಾಗಿ ಮಾತ್ರವಲ್ಲ, ಮಾರ್ಗದರ್ಶಕರಾಗಿಯೂ ಗಣೇಶ್ ಹೆಸರು ಮಾಡಿದ್ದಾರೆ. ಜೇನು ಕೃಷಿಗೆ ಬಳಸುವ ಸ್ಟ್ಯಾಂಡ್, ಕಟ್ಟಿಗೆ ಬಾಕ್ಸ್ ತಯಾರಿಕೆ, ರಟ್ಟಿನ ಮಾರಾಟದ ಬಗ್ಗೆ ಆಸಕ್ತ ಕೃಷಿಕರಿಗೆ ಮಾಹಿತಿ ನೀಡುತ್ತಾರೆ. ಬೆಟ್ಟದ ಜೇನನ್ನು ಸಂಗ್ರಹಿಸುವ ಸಾಹಸವನ್ನೂ ಮಾಡುತ್ತಾರೆ.

ಡಿಗ್ರಿಗಳಿಗೆ ಜೋತುಬಿದ್ದು ಒಳ್ಳೆಯ ಕೆಲಸ ದೊರೆಯದೆ ಕೊರಗುವ ವಿದ್ಯಾವಂತ ಯುವಕರಿಗೆ ಗಣೇಶ್ ಅವರ ಜೇನುಕೃಷಿ ಬದುಕನ್ನು ಭಿನ್ನವಾಗಿ ನೋಡಲು ಪ್ರೇರಣೆ ಒದಗಿಸುವಂತಿದೆ. ನಮ್ಮ ಸುತ್ತಮುತ್ತಲೇ ಮಾಡಲಿಕ್ಕೆ ನೂರೆಂಟು ಕೆಲಸಗಳುಂಟು. ಅವುಗಳನ್ನು ನೋಡುವ ಕಣ್ಣು ಹಾಗೂ ಮಾಡುವ ಶ್ರದ್ಧೆ ಬೇಕಷ್ಟೆ.

ಪ್ರತಿಕ್ರಿಯಿಸಿ: feedback@sudha.co.in